ಗುಣಮಟ್ಟದ್ದಾಗಿದ್ದುದರಿಂದ ವಿಫಲಗೊಂಡಿದ್ದು, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯ ಗಮನಕ್ಕೆ ಬಂದಿರುತ್ತದೆ. ಗುತ್ತಿಗೆದಾರರಾದ ಮೆ॥ ತರೂಣಾ ಡೆಖೋಮ್ ಇಂಡಸ್ಟ್ರೀಸ್, ಬಿಕನ್ಯಾರ್ ಕಂಪನಿಯನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದೆ.

(ಇ) ಹಾಲಿ ಗುತ್ತಿಗೆದಾರರಾದ ಮೆ॥ ತರೂಣಾ ಡೆಖೋಮ್ ಇಂಡಸ್ಟ್ರೀಸ್, ಬಿಕನ್ಯಾರ್ ಕಂಪನಿಗೆ ನೀಡಿದ್ದ ಕಾಮಗಾರಿಗಳನ್ನು ರದ್ದುಪಡಿಸಲಾಗಿದೆ.

ಸದರಿ ಯೋಜನೆಯ ಪ್ರಮುಖ ಸಾಮಗ್ರಿಗಳಾದ ಕಂಬಗಳು, ವಿದ್ಯುತ್ ತಂತಿ ಮತ್ತು 11 ಕೆ. ವಿ ಉತ್ತಮ ಗುಣಮಟ್ಟದ ಇನ್ಸುಲೇಟರ್‌ಗಳನ್ನು ಬೇರೊಂದು ಕಂಪನಿಯಿಂದ ಖರೀದಿಸಿ ಅರ್ಹ ಗುತ್ತಿಗೆದಾರರಿಗೆ ನೀಡಿ ನಿರಂತರ ಜ್ಯೋತಿ ಮಾರ್ಗಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ

905 (906);ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮೀ ಲೇಔಟ್)

(ಅ) ರಾಜ್ಯದಲ್ಲಿ ಪ್ರತಿ ದಿನ ವಿದ್ಯುತ್ ಬೇಡಿಕೆ ಎಷ್ಟು;

(ಆ) ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ವಿದ್ಯುತ್ ಪ್ರಮಾಣವೆಷ್ಟು;

(ಇ) ಹೊರ ರಾಜ್ಯಗಳಿಂದ ಹಾಗೂ ಕೇಂದ್ರದ ಗ್ರಿಡ್‌ನಿಂದ ಬರತಕ್ಕ ವಿದ್ಯುತ್ ಎಷ್ಟು;

(ಈ) ರಾಜ್ಯದಲ್ಲಿ ಪ್ರತಿದಿನ ಎಷ್ಟು ವಿದ್ಯುತ್ ಕೊರತೆ ಇದೆ;

(ಉ) ರಾಜ್ಯದಲ್ಲಿ 2008 ರಿಂದ ಇಲ್ಲಿಯವರೆಗೆ ಕೈಗೊಂಡ ಹೊಸ ವಿದ್ಯುತ್ ಉತ್ಪಾದನಾ ಯೋಜನೆಗಳು ಯಾವುವು;

(ಊ) ಇವುಗಳಿಗಾಗಿ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು;

(ಋ) 2013–14ನೇ ಸಾಲಿನಲ್ಲಿ ಕೈಗೊಂಡ ಹೊಸ ವಿದ್ಯುತ್ ಉತ್ಪಾದನಾ ಯೋಜನೆಗಳು ಯಾವುವು;

(ಎ) ಹೊಸದಾಗಿ ಉಷ್ಣ ವಿದ್ಯುತ್ ಸ್ಥಾವರ ತೆರೆಯಲು ಕೈಗೊಂಡ ಕ್ರಮ ಗಳೇನು?

ಶ್ರೀ ಡಿ. ಕೆ. ಶಿವಕುಮಾರ್ (ಇಂಧನ ಸಚಿವರು)

(ಅ) ರಾಜ್ಯದಲ್ಲಿ ದೈನಂದಿನ ಸರಾಸರಿ ನಿರ್ಬಂಧಿತ ಬೇಡಿಕೆ ಪ್ರಮಾಣ 159 ಮಿಲಿಯನ್ ಯೂನಿಟ್‌ಗಳಾಗಿರುತ್ತದೆ.

(ಆ) ರಾಜ್ಯದಲ್ಲಿ ಎಲ್ಲಾ ಮೂಲಗಳಿಂದ ಉತ್ಪಾದನೆಯಾಗುತ್ತಿರುವ ಸರಾಸರಿ ವಿದ್ಯುತ್‌ನ ಪ್ರಮಾಣ 106 ಮಿಲಿಯನ್ ಯೂನಿಟ್‌ಗಳು.

(ಇ) ಹೊರ ರಾಜ್ಯಗಳಿಂದ ಮತ್ತು ಕೇಂದ್ರಿಯ ಘಟಕಗಳಿಂದ ಲಭ್ಯವಿರುವ ದೈನಂದಿನ ಸರಾಸರಿ ವಿದ್ಯುತ್ ಪ್ರಮಾಣವು 49 ಮಿಲಿಯನ್ ಯೂನಿಟ್‌ಗಳು.

(ಈ) ದೈನಂದಿನ ವಿದ್ಯುತ್ ಕೊರತೆ ಪ್ರಮಾಣವು ಸರಾಸರಿ 4 ಮಿಲಿಯನ್ ಯೂನಿಟ್ ಗಳು.

(ಉ) ರಾಜ್ಯದಲ್ಲಿ 2008–09ರಿಂದ 2013–14ನೇ ಸಾಲಿನವರೆಗೆ ಸೇರ್ಪಡೆಗೊಂಡ ವಿದ್ಯುತ್ ಉತ್ಪಾದನಾ ಯೋಜನೆಗಳು ಹಾಗೂ ಪ್ರಸ್ತುತ ಚಾಲ್ತಿಯಲ್ಲಿರುವ ಉದ್ದೇಶಿತ ಹೊಸ ವಿದ್ಯುತ್ ಯೋಜನೆಗಳ ವಿವರ ಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

(ಊ) ಕ.ವಿ.ನಿ.ನಿ., ವತಿಯಿಂದ 2008 ರಿಂದ ಇಲ್ಲಿಯವರೆಗೆ ಕೈಗೊಂಡ ಹೊಸ ವಿದ್ಯುತ್ ಉತ್ಪಾದನಾ ಯೋಜನೆಗಳಿಗೆ ಮಾಡಿರುವ ವಾರ್ಷಿಕ ವೆಚ್ಚ ಈ ಕೆಳಕಂಡಂತಿದೆ:

ವರ್ಷ	ವೆಚ್ಚ (ರೂ. ಕೋಟಿಗಳಲ್ಲಿ)
2008–09	1238.05
2009–10	1001.56

2010–11	1453.30
2011–12	1106.37
2012–13	2363.17
2013–14	3414.79

(ಖ) 2013–14ನೇ ಸಾಲಿನಲ್ಲಿ ಯಾವುದೇ ಹೊಸ ಸಾಂಪ್ರದಾಯಿಕ ವಿದ್ಯುತ್ ಉತ್ಪಾದನಾ ಯೋಜನೆಗಳನ್ನು ಕೈಗೊಂಡಿರುವುದಿಲ್ಲ.

(ಎ) ರಾಜ್ಯದಲ್ಲಿ ಹೊಸದಾಗಿ ಬೃಹತ್ ಉಷ್ಣ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು ಕರಾವಳಿ ಪ್ರದೇಶದಲ್ಲಿ ಭೂಮಿಯನ್ನು ಗುರುತಿಸುವ ಪ್ರಕ್ರಿಯೆ ಪರಿಶೀಲನೆಯಲ್ಲಿದೆ.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮೀ ಲೇಔಟ್) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 906ಕ್ಕೆ ಅನುಬಂಧ

2008–09ರಿಂದ 2013–14ನೇ ಸಾಲಿನವರೆಗೆ ಸೇರ್ಪಡೆಗೊಂಡ ಹೊಸ ವಿದ್ಯುತ್ ಯೋಜನೆಗಳ ವಿವರಗಳು ಕೆಳಕಂಡಂತಿವೆ.

ವರ್ಷ	ಕೆಪಿಸಿಎಲ್		ಸೌರ	ಖಾಸಗಿ ಮೂಲಗಳು		ಒಟ್ಟು
	ಜಲ ವಿದ್ಯುತ್	ಶಾಖೋತ್ಪನ್ನ		ಸ್ವತಂತ್ರ ಬೃಹತ್ ಉತ್ಪಾದಕರು	ನವೀಕೃತ ಇಂಧನ ಮೂಲಗಳು	
2008–09	230 (ವರಾಹಿ 5 & 6ನೇ ಘಟಕ)	500 (ಬಿಟಿಪಿಎಸ್–1ನೇ ಘಟಕ)	–	–	522	1252
2009–10	–	–	6 (ಬೆಳಗಾಂ & ಕೋಲಾರ್)	–	350	356
2010–11	–	250 (ಆರ್‌ಟಿಪಿಎಸ್ 8ನೇ ಘಟಕ)	–	600 (ಯುಪಿಸಿಎಲ್ ಮೊದಲನೇ ಘಟಕ)	400	1250
2011–12	–	–	3 (ರಾಯಚೂರು)	–	437	440
2012–13	–	500 (ಬಿಟಿಪಿಎಸ್–2ನೇ ಘಟಕ)	5 (ಮಂಡ್ಯ)	600 (ಯುಪಿಸಿಎಲ್ 2ನೇ ಘಟಕ)	4008	1513
2013–14	–	–	–	–	328	328

ಪ್ರಸ್ತುತ ಚಾಲ್ತಿಯಲ್ಲಿರುವ ಉದ್ದೇಶಿತ ಹೊಸ ವಿದ್ಯುತ್ ಯೋಜನೆಗಳ ವಿವರಗಳನ್ನು ಕೆಳಕಂಡಂತಿದೆ.

ಬಿಜಾಪುರ ಜಿಲ್ಲೆ ಕೂಡಗಿಯಲ್ಲಿ ಎನ್‌ಟಿಪಿಸಿ ರವರ ಸಹಯೋಗ ದೊಂದಿಗೆ 4000 ಮೆಗಾವ್ಯಾಟ್ ಸಾಮರ್ಥ್ಯದ ಕಲ್ಲಿದ್ದಲು ಆಧಾರಿತ ವಿದ್ಯುತ್ ಸ್ಥಾವರ ಪ್ರಗತಿಯಲ್ಲಿದ್ದು, ಇದರಲ್ಲಿ ರಾಜ್ಯದ ಪಾಲು 2000 ಮೆಗಾ ವ್ಯಾಟ್‌ಗಳಾಗಿರುತ್ತದೆ.

ಕೆಪಿಸಿಎಲ್ ವತಿಯಿಂದ 700 ಮೆಗಾವ್ಯಾಟ್ ಸಾಮರ್ಥ್ಯದ ಬಿಟಿ ಪಿಎಸ್ ಘಟಕ–3 ಹಾಗೂ 1600 ಮೆಗಾವ್ಯಾಟ್ ಸಾಮರ್ಥ್ಯದ ಯರಮರಸ್ ಯೋಜನೆಗಳು 2014–15ರಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ಕೆಪಿಸಿಎಲ್ ವತಿಯಿಂದ ರಾಯಚೂರು ಜಿಲ್ಲೆಯ ಯಡ್ಲಾಪುರದಲ್ಲಿ 800 ಮೆಗಾವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಸ್ಥಾವರ ಸ್ಥಾಪನೆಗೆ ಕ್ರಮ.

ಕೆಪಿಸಿಎಲ್ ವತಿಯಿಂದ ಛತ್ತೀಸ್‌ಗಢದಲ್ಲಿ 1600 ಮೆಗಾವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಸ್ಥಾವರ ಸ್ಥಾಪನೆಗೆ ಕ್ರಮ.

ಕೆಪಿಸಿಎಲ್ ವತಿಯಿಂದ ಬಿಡದಿ ವಿದ್ಯುತ್ ಕೇಂದ್ರದಲ್ಲಿ ಮೊದಲ 700 ಮೆಗಾವ್ಯಾಟ್ ಸಾಮರ್ಥ್ಯದ ಅನಿಲಾಧಾರಿತ ಘಟಕ ಸ್ಥಾಪನೆಗೆ ಕ್ರಮ.

ಖಾಸಗಿಯವರಿಂದ ಗುಲ್ಬರ್ಗಾ ಮತ್ತು ಘಟಪ್ರಭಾದಲ್ಲಿ ತಲಾ 1320 ಮೆಗಾವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಸ್ಥಾವರ ಸ್ಥಾಪನೆಗೆ ಕ್ರಮ.

ನವೀಕೃತ ಇಂಧನ ಮೂಲಗಳ ನೀತಿಯಲ್ಲಿ ತಿಳಿಸಿರುವಂತೆ ಮುಂಬ ರುವ ವರ್ಷಗಳಲ್ಲಿ ಸುಮಾರು 4000 ಮೆಗಾವ್ಯಾಟ್ ಉತ್ಪಾದನಾ ಸಾಮರ್ಥ್ಯ ಸೇರ್ಪಡೆಗೆ ಕ್ರಮವಹಿಸಲಾಗಿದೆ.

ಸೌರ ವಿದ್ಯುತ್ ನೀತಿಯಡಿಯಲ್ಲಿ 2014–21ರವರೆಗೆ ಕನಿಷ್ಠ 2000 ಮೆಗಾವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಘಟಕಗಳ ಸ್ಥಾಪನೆಗೆ ಕ್ರಮ.